
ಸರ್ಕಾರಿ ಪ್ರೌಢಶಾಲೆ ಬೇಗೂರು ಬೆಂಗಳೂರು-೬೮

## ರಮ್ಯಸೃಷ್ಟಿ---- ಮಧುರ ಚೆನ್ನ



**ಕವಿ ಪರಿಚಯ : ಹಲಸಂಗಿ ಮಧುರಚೆನ್ನ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಚನ್ನಮಲ್ಲಪ್ಪ ಅವರು ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಹಲಸಂಗಿಯವರು. ಅವರ ಕಾಲ ಕ್ರಿ.ಶ.೧೯೦೩ ರಿಂದ ೧೯೫೩ .ಅವರು ಪೂರ್ವರಂಗ,ಪೂರ್ವಯೋಗದ ಪಥದಲ್ಲಿ,ಕಾಳರಾತ್ರಿ ,ಬೆಳಗು ಇತ್ಯಾದಿ ಕೃತಿಗಳನ್ನು ಬರೆದಿದ್ದಾರೆ. ಪ್ರಸ್ತುತ ರಮ್ಯಸೃಷ್ಟಿ ಕವಿತೆಯನ್ನು ಇವರ 'ನನ್ನ ನಲ್ಲ' ಕವನ ಸಂಕಲನದಿಂದ ಆರಿಸಲಾಗಿದೆ.**

**<u>ಸಾರಾಂಶ</u>**

**ರಮ್ಯಸೃಷ್ಟಿ ಈ ಕವನದಲ್ಲಿ ಕವಿ ಸೂರ್ಯೋದಯ ಸಂದರ್ಭದ ಪ್ರಕೃತಿ ಸೌಂದರ್ಯವನ್ನು ಬಣ್ಣಿಸಿದ್ದಾರೆ.**

**ವಿಶಾಲವಾದ ಅನಂತ ಆಕಾಶವೆನ್ನುವ ಶಿರದ ಮೇಲೆ,ರಮ್ಯವಾದ ಮನೋಹರವಾದ ಮನಮೋಹಕವಾದ ಭೂಮಿಯ ಮುಂದೆ,ಆಕಾಶ ಭೂಮಿ ಒಂದಾದಂತೆ ಕಾಣುವಲ್ಲಿ ಎಂತಹ ಮನಮೋಹಕ ನೋಟ ದೂರದುದ್ದಕ್ಕೂ ಪ್ರಭೆಯಿಂದ ಆವೃತನಾದ ,ಬೆಳಕನ್ನು ನೀಡುವ ಸೂರ್ಯನು ಆಕಾಶವೆನ್ನುವ ಅಂಗಣದಲ್ಲಿ ವಿರಾಜಿತನಾಗಿರುವನು. ಬಿಳಿಯ ಮೋಡಗಳು, ನೀಲಿಯ ಆಕಾಶದಲ್ಲಿ ಅಲ್ಲಿ ಇಲ್ಲಿ ಚೆದುರಿದಂತಿರಲು ಸೂರ್ಯನ ಬಂಗಾರದ ಬಣ್ಣದ ಬಿಸಿಲು ರತ್ನದಂತಹ ನೆಲದ ಮೇಲೆ ಎಲ್ಲ ಕಡೆ ಹರಡಲು ,ಹಸಿರು ಮರಗಳು ನೆಲದ ಮೇಲೆ ಹರಡಿರುವ ಹುಲ್ಲು ಹಚ್ಚ ಹಸಿರಾಗಿರಲು, ಮರದ ಸಾಲುಗಳು ಮೇವ ಮೇಕೆ ಹಾರಾಡುತ್ತಿರುವ ಪಕ್ಷಿಗಳು ಎಲ್ಲೆಡೆಯೂ ಚೆಲುವು ,ಎಲ್ಲಿ ನೋಡಿದರೂ ಚೆಲುವು ,ಎಲ್ಲವೂ ಚೆಲುವು . ಎತ್ತು ,ಎಮ್ಮೆ,ಆಡು ,ಹಸು ಮೊದಲಾದ ಪ್ರಾಣಿಗಳು ಚಿತ್ತಗೊಟ್ಟು ಮೇಯುತ್ತಿರುವ ಸೊಗಸು, ಗಂಡು -ಹೆಣ್ಣು ,ಮಗು ,ನಾಯಿ ಬೆಟ್ಟಗುಡ್ಡಗಳು ಹಾದಿ ಬೀದಿ ಎಲ್ಲವೂ ರಮ್ಯವಾದ ಚೆಲುವಿನಿಂದ ಕೂಡಿರಲು ಪ್ರಕೃತಿಯ ಈ ಸೌಂದರ್ಯಕ್ಕೆ ಮಿಗಿಲಾದುದು ,ಈ ಚೆಲುವಿಗೆ ಸಾಟಿಯಾದುದು ಎಲ್ಲಿದೆ ? ಎಂದು ಪ್ರಶ್ನಿಸಿದ್ದಾರೆ ಕವಿ .**

**ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.**

**೧.ರಮ್ಯ ಸೃಷ್ಟಿ ಕವನವನ್ನು ಬರೆದವರು -----(ಹಲಸಂಗಿ ಮಧುರ ಚೆನ್ನರು ).**

**೨.ಪ್ರಸ್ತುತ ಕವಿತೆಯನ್ನು ------ಸಂಕಲನದಿಂದ ಆರಿಸಲಾಗಿದೆ... (ನನ್ನ ನಲ್ಲ )**

**೩.ಮಧುರ ಚೆನ್ನ ಅವರು ---- ರಲ್ಲಿ ನಿಧನರಾದರು.(೧೯೫೩ ರಲ್ಲಿ )**

**೪.ವಿಭಾಕರ ಪದದ ಅರ್ಥ ---(ಸೂರ್ಯ )**

**ಒಂದು ವಾಕ್ಯದಲ್ಲಿ ಉತ್ತರಿಸಿ.**

**೧. ರಮ್ಯಸೃಷ್ಟಿ ಕವಿತೆಯಲ್ಲಿ ಯಾವ ಸಂದರ್ಭವನ್ನು ವರ್ಣಿಸಲಾಗಿದೆ ?**

**ರಮ್ಯಸೃಷ್ಟಿ ಕವಿತೆಯಲ್ಲಿ ಸೂರ್ಯೋದಯದ ಸಂದರ್ಭವನ್ನು ಬಣ್ಣಿಸಲಾಗಿದೆ.**

**೨.ಸೂರ್ಯ ಎಲ್ಲಿ ವಿರಾಜಿಸುತ್ತಿದ್ದಾನೆ ?**

**ನಭಾಂಗಣದಿ ಸೂರ್ಯ ವಿರಾಜಿಸುತ್ತಿದ್ದಾನೆ .**

ಮಮತಾ ಭಾಗ್ವತ್.ಸಹಶಿಕ್ಷಕಿ. mamatabhagwat1@gmail.com

**೩.ಕವಿ ಸೂರ್ಯ ಎಂತವನೆಂದು ಹೇಳಿದ್ದಾರೆ?**

**ಕವಿ ಸೂರ್ಯನು ಪ್ರಭಾಮಯನು ಎಂದು ಹೇಳಿದ್ದಾರೆ.**

**೪.ರಮ್ಯ ಸೃಷ್ಟಿ ಪದ್ಯದಲ್ಲಿ ಯಾವ ಯಾವ ಪ್ರಾಣಿಗಳು ಮೇಯುವ ರೀತಿಯನ್ನು ವರ್ಣಿಸಲಾಗಿದೆ?**

**ರಮ್ಯಸೃಷ್ಟಿ ಪದ್ಯದಲ್ಲಿ ಎತ್ತು,ಎಮ್ಮೆ,ಆಡು ,ಹಸು ಮೊದಲಾದ ಪ್ರಾಣಿಗಳು ಮೇಯುವ ರೀತಿಯನ್ನು ವರ್ಣಿಸಲಾಗಿದೆ .**

**ಯಾವುದರ ಚೆಲುವಿಗೆ ಮಿಗಿಲಿಲ್ಲದಂತಾಗಿದೆ?**

**ಸೂರ್ಯೋದಯ ಸಂದರ್ಭದ ಪ್ರಕೃತಿಯ ಚೆಲುವಿಗೆ ಮಿಗಿಲಿಲ್ಲದಂತಾಗಿದೆ.**

**೬.ಯಾವುದೆಲ್ಲ ಹಸಿರಾಗಿದೆ?**

**ಮರ,ಗಿಡ,ಹುಲ್ಲು ಹಚ್ಚ ಹಸಿರಾಗಿದೆ.**

**ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

**೧.ಸೂರ್ಯೋದಯದ ಪ್ರಕೃತಿ ಸೌಂದರ್ಯ ಹೇಗಿದೆ?**

**ವಿಶಾಲವಾದ ಆಕಾಶವೆನ್ನುವ ಶಿರದ ಮೇಲೆ ,ಭೂಮಿ ಬಾನು ಒಂದಾದಂತೆ ಕಾಣುವಲ್ಲಿ ಪ್ರಭೆಯಿಂದ ಆವೃತನಾದ ಸೂರ್ಯನು ಆಕಾಶವೆನ್ನುವ ಅಂಗಣದಲ್ಲಿ ವಿರಾಜಿತನಾಗಿರುವನು.ನೀಲಿಯಾಕಾಶದಲ್ಲಿ ಚೆದುರಿರುವ ಬಿಳಿಯ ಮೋಡಗಳು ,ಸೂರ್ಯನ ಬಂಗಾರಬಣ್ಣದ ಬಿಸಿಲು ರತ್ನದಂತಹ ನೆಲದ ಮೇಲೆ ಎಲ್ಲ ಕಡೆ ಸೂಸಿ ಭೂಮಿಯು ಕಂಗೊಳಿಸುತ್ತಿದೆ.ಎಲ್ಲ ಜೀವರಾಶಿಗಳು (ಪಕ್ಷಿ,ಆಡು ,ದನ ಕರು ,ಎತ್ತು )ತಮ್ಮ ತಮ್ಮ ಕಾರ್ಯದಲ್ಲಿ ನಿರತವಾಗಿವೆ .ಸೂರ್ಯೋದಯ ಕಾಲದ ಈ ಸೌಂದರ್ಯಕ್ಕೆ ಸರಿಸಾಟಿಯಾದುದು ಯಾವುದೂ ಇಲ್ಲ.**

**೨. ಜೀವರಾಶಿಯ ವರ್ಣನೆ ರಮ್ಯಸೃಷ್ಟಿ ಕವನದಲ್ಲಿ ಹೇಗೆ ಮೂಡಿ ಬಂದಿದೆ?**

**ಹಾರಾಡುವ ಚಿಲಿಪಿಲಿ ನಾದ ಗೈಯುವ ಪಕ್ಷಿಗಳು ,ಮನಗೊಟ್ಟು ಮೇಯುತ್ತಿರುವ ಎತ್ತು,ಎಮ್ಮೆ,ಆಡು,ಹಸು ಗಳು ,ತಮ್ಮ ತಮ್ಮ ಬೆಳಗಿನ ಕಾರ್ಯಚಟುವಟಿಕೆಗಳಲ್ಲಿ ನಿರತರಾಗಿರುವ ಮನುಷ್ಯ ವರ್ಗ ,ನಾಯಿ ಮರಿ ಎಲ್ಲ ಜೀವರಾಶಿಗಳು ಚೆಲುವಾಗಿ ,ಗೆಲುವಾಗಿ ಬೆಳಗಿನ ದೈನಂದಿನ ಕೆಲಸ ಕಾರ್ಯಗಳಲ್ಲಿ ನಿರತವಾಗಿವೆ.ಸೃಷ್ಟಿಯ ಈ ಸೌಂದರ್ಯಕ್ಕೆ ಮಿಗಿಲಾದುದು ಯಾವುದೂ ಇಲ್ಲ ಎಂದು ಕವಿ ವರ್ಣಿಸಿದ್ದಾರೆ.**

**ಸಂದರ್ಭ ಸಹಿತ ವಿವರಿಸಿ.**

**೧.ಪ್ರಭಾಮಯನು ವಿಭಾಕರನು, ನಭಾಂಗಣದಿ ವಿರಾಜಿಪನು**

**ಈ ಮೇಲಿನ ವಾಕ್ಯವನ್ನು ಹಲಸಂಗಿ ಮಧುರ ಚೆನ್ನರು ಬರೆದ 'ರಮ್ಯಸೃಷ್ಟಿ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.**

**ಕವಿ ಬಾನು ಭೂಮಿ ಅಪ್ಪಿರುವಂತೆ ಕಾಣುವ ಆಕಾಶದ ಕೇಂದ್ರದಲ್ಲಿ ಸೂರ್ಯನು ಉದಯವಾಗಿದ್ದು ,ಜಗತ್ತಿನ ಕತ್ತಲೆಯನ್ನು ಹೊಡೆದೋಡಿಸುವಂತೆ ಪ್ರಭಾಮಯನಾಗಿದ್ದು ನಭಾಂಗಣದಿ ವಿರಾಜಿಸುತ್ತಿರುವನು ಎಂದು ವರ್ಣಿಸಿದ್ದಾರೆ.**

**೨.''ಹೊನ್ನ ಬಿಸಿಲು ಸೂಸಿ ಸೂಸಿ, ರನ್ನ ನೆಲದಿ ಹಾಸಿ ಹಾಸಿ ''**

**ಈ ಮೇಲಿನ ವಾಕ್ಯವನ್ನು ಹಲಸಂಗಿ ಮಧುರ ಚೆನ್ನರು ಬರೆದ 'ರಮ್ಯಸೃಷ್ಟಿ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.**

**ಸೂರ್ಯೋದಯದ ಸಂದರ್ಭದಲ್ಲಿ ಸೂರ್ಯನ ಕೆಂಪು ಬಣ್ಣದ ಕಿರಣಗಳು ಹೊನ್ನಿನಂತಿದ್ದು ರತ್ನದಂತಹ ನೆಲದ ಮೇಲೆ ಹಾಸಿದಂತೆ ಕಾಣುತ್ತದೆ ಎಂದು ಕವಿ ವರ್ಣಿಸಿದ್ದಾರೆ.**

**೩.''ತರುವು ಹಸಿರು ,ಮರವು ಹಸಿರು ''**

**ಈ ಮೇಲಿನ ವಾಕ್ಯವನ್ನು ಹಲಸಂಗಿ ಮಧುರ ಚೆನ್ನರು ಬರೆದ 'ರಮ್ಯಸೃಷ್ಟಿ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.**

**ಸೂರ್ಯೋದಯದ ಸಂದರ್ಭವನ್ನು ವರ್ಣಿಸುತ್ತಾ ಕವಿ ಎಲ್ಲ ಮರಗಿಡಗಳೂ ನೆಲದ ಮೇಲೆ ಹರಡಿರುವ ಹುಲ್ಲು ಹಚ್ಚ ಹಸಿರಿನಿಂದ ಕಂಗೊಳಿಸುತ್ತಿವೆ ಎಂದು ವರ್ಣಿಸಿದ್ದಾರೆ.**

**೪.''ಎತ್ತು ಎಮ್ಮೆ ಆಡು ಆವು ,ಚಿತ್ತಗೊಟ್ಟು ಮೇವ ಠೀವು ''**

**ಈ ಮೇಲಿನ ವಾಕ್ಯವನ್ನು ಹಲಸಂಗಿ ಮಧುರ ಚೆನ್ನರು ಬರೆದ 'ರಮ್ಯಸೃಷ್ಟಿ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.**

**ಸೂರ್ಯೋದಯದ ಸಂದರ್ಭದಲ್ಲಿ ಎಲ್ಲ ಪ್ರಾಣಿಗಳೂ ಮನಗೊಟ್ಟು ಮೇಯುತ್ತಿರುವ ಗಾಂಭೀರ್ಯದ ಸೊಬಗಿನ ನೋಟವನ್ನು ನೋಡಬಹುದು ಎಂದು ಕವಿ ವರ್ಣಿಸಿದ್ದಾರೆ.**

**೫.''ದಿನ್ನಿ ದಿಬ್ಬ ಹಾದಿ ಬೀದಿ ಏನು ಚೆಂದ ಏನು ಚೆಲುವು ''**

**ಈ ಮೇಲಿನ ವಾಕ್ಯವನ್ನು ಹಲಸಂಗಿ ಮಧುರ ಚೆನ್ನರು ಬರೆದ 'ರಮ್ಯಸೃಷ್ಟಿ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.**

**ಸೂರ್ಯೋದಯದ ವೇಳೆಯಲ್ಲಿ ಬೆಳಗಿನ ಪ್ರಕೃತಿಯು ರಮ್ಯವಾಗಿದ್ದು ಬೆಟ್ಟ ಗುಡ್ಡ ಹಾದಿ ಬೀದಿ ಎಲ್ಲಿ ನೋಡಿದರೂ ಸೌಂದರ್ಯವೇ ಮೈವೆತ್ತಂತೆ ಭಾಸವಾಗುತ್ತದೆ ಎಂದು ಕವಿ ಹೇಳಿದ್ದಾರೆ.**

**೬.''ಏನು ಬೇಕು ಇದಕು ಮಿಗಿಲು ''**

**ಈ ಮೇಲಿನ ವಾಕ್ಯವನ್ನು ಹಲಸಂಗಿ ಮಧುರ ಚೆನ್ನರು ಬರೆದ 'ರಮ್ಯಸೃಷ್ಟಿ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.**

**ಸೂರ್ಯೋದಯದ ಸಂದರ್ಭದ ಪ್ರಕೃತಿ ಸೌಂದರ್ಯಕ್ಕೆ ಸರಿಸಾಟಿಯಾದುದು ಯಾವುದೂ ಇಲ್ಲ ಎಂದು ಕವಿ ವರ್ಣಿಸಿದ್ದಾರೆ.**

**೭.''ಆಹಾ, ಪೃಥ್ವಿ ರಮ್ಯ ಮುಂದೆ''**

**ಈ ಮೇಲಿನ ವಾಕ್ಯವನ್ನು ಹಲಸಂಗಿ ಮಧುರ ಚೆನ್ನರು ಬರೆದ 'ರಮ್ಯಸೃಷ್ಟಿ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.**

**ಸೂರ್ಯೋದಯ ಸಂದರ್ಭದ ಪ್ರಕೃತಿ ವರ್ಣನೆ ಮಾಡುವಾಗ ಕವಿ ಪೃಥ್ವಿಯು ಮನೋಹರವಾಗಿ ನಮ್ಮ ಕಣ್ಮನಗಳನ್ನು ತಣಿಸುತ್ತದೆ ಎಂದು ವರ್ಣಿಸಿದ್ದಾರೆ.**

**೮.''ಬಾನು ಭೂಮಿ ಅಪ್ಪಿದಲ್ಲಿ ಏನು ರಮ್ಯ ದೂರದಲ್ಲಿ ''**

**ಈ ಮೇಲಿನ ವಾಕ್ಯವನ್ನು ಹಲಸಂಗಿ ಮಧುರ ಚೆನ್ನರು ಬರೆದ 'ರಮ್ಯಸೃಷ್ಟಿ' ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕವಿ ಹೇಳಿದ್ದಾರೆ.**

**ಸೂರ್ಯೋದಯದ ಸಂದರ್ಭದಲ್ಲಿ ದಿಗಂತದ ಕೇಂದ್ರದಲ್ಲಿ ಸೂರ್ಯನ ಉದಯವಾಗುವಾಗ ಬಾನುಭೂಮಿಪರಸ್ಪರ ಒಂದಾದಂತೆ ಕಾಣುತ್ತದೆ ಎಂದು ಕವಿ ವರ್ಣಿಸಿದ್ದಾರೆ.**

## ವ್ಯಾಕರಣಾಂಶಗಳು

**ತತ್ಸಮ ತದ್ಭವ**

**ಭೂಮಿ -ಬುವಿ**

**ರತ್ನ -ರನ್ನ**

**ಪಕ್ಷಿ-ಹಕ್ಕಿ**

**ಆಕಾಶ -ಆಗಸ**

**ಜೋಡುನುಡಿಗಳು**

**ಅಲ್ಲಿಇಲ್ಲಿ , ಹಾದಿಬೀದಿ**

**ಸಂಧಿಗಳು**

**ಚಿತ್ತಗೊಟ್ಟು: ಚಿತ್ತ+ಕೊಟ್ಟು=ಆದೇಶಸಂಧಿ**

**ಮಹಾಕಾಶ :ಮಹಾ+ಆಕಾಶ = ಸವರ್ಣದೀರ್ಘಸಂಧಿ**

**ಅಲಂಕಾರ ಹೆಸರಿಸಿ ಸಮನ್ವಯಿಸಿ**

**ನಭಾಂಗಣ**

**ಉಪಮೇಯ : ನಭ**

**ಉಪಮಾನ : ಅಂಗಣ**

**ಅಲಂಕಾರ : ರೂಪಕ**

**ಸಮನ್ವಯ : ಉಪಮೇಯವಾದ ನಭವನ್ನು ಉಪಮಾನವಾದ ಅಂಗಣ ಎಂದು ತಾದ್ರೂಪ್ಯ ಕಲ್ಪಿಸಿರುವುದರಿಂದ ಇದು ರೂಪಕ ಅಲಂಕಾರವಾಗಿದೆ.**

**ಹೊನ್ನ ಬಿಸಲು : ರೂಪಕ ಅಲಂಕಾರ**

**ರನ್ನನೆಲ : ರೂಪಕ ಅಲಂಕಾರ**

ಮಮತಾ ಭಾಗ್ವತ್.ಸಹಶಿಕ್ಷಕಿ. mamatabhagwat1@gmail.com